

ಮಂಡ್ಯದ ಸಾತನೂರಿನ ಗ್ರಾಮೀಣ ಪ್ರತಿಭೆ **ಎಸ್. ವಿಶ್ವಾಸ್** ಈಗ 'ಪಟ್ನಾ ಪೈರೇಟ್ಸ್' ತಂಡದ ಸದಸ್ಯ



ಬ್ಯಾಡ್ಮಿಂಟನ್ ಲೀಗ್, ಹಾಕಿ ಇಂಡಿಯಾ ಲೀಗ್, ಐ ಲೀಗ್, ಅಲ್ಟಿಮೇಟ್ ಟೇಬಲ್ ಟೆನಿಸ್, ಇಂಡಿಯನ್ ವಾಲಿ ಲೀಗ್, ಕುಸ್ತಿ ಲೀಗ್ ಹೀಗೆ ಅನೇಕ ಕ್ರೀಡೆಗಳ ಲೀಗ್ ಪರ್ವವೇ ಆರಂಭವಾಯಿತು. ಐಪಿಎಲ್‌ನಲ್ಲಿ ದೊಡ್ಡದಾಗಿ ಸದ್ದು ಮಾಡಿದ ಝಣ ಝಣ ಕಾಂಚಾಣದ ಪ್ರಭಾವ ವಿದೇಶಗಳಲ್ಲಿಯೂ ಆಗಿ – ಪಾಕಿಸ್ತಾನ, ವೆಸ್ಟ್ ಇಂಡೀಸ್, ಶ್ರೀಲಂಕಾ, ಬಾಂಗ್ಲಾದೇಶ ಹೀಗೆ ಅನೇಕ ದೇಶಗಳಲ್ಲಿ ಕ್ರಿಕೆಟ್ ಲೀಗ್‌ನ ವ್ಯಾಪ್ತಿ ವಿಸ್ತಾರಗೊಂಡಿತು. ತನ್ನ ಹೊಳಪು ಕಡಿಮೆಯಾಗುವ ಆತಂಕದಿಂದ ಬಿಸಿಸಿಐ ವಿದೇಶದ ಲೀಗ್‌ಗಳಿಗೆ ಭಾರತದ ಆಟಗಾರರನ್ನು ಕಳುಹಿಸಲಿಲ್ಲ; ವಿದೇಶಿ ಆಟಗಾರರನ್ನು 'ಐಪಿಎಲ್'ಗೆ ಕರೆಸಿಕೊಂಡಿತು.

ಈ ಎಲ್ಲಾ ಲೀಗ್‌ಗಳು ಯಾವ ಹಂತದಲ್ಲಿಯೂ ಕ್ರಿಕೆಟ್‌ಗೆ ಸವಾಲೊಡ್ಡುವ ರೀತಿಯಲ್ಲಿ ಜನಮನ್ನಣೆ ಹಾಗೂ ಖ್ಯಾತಿ ಪಡೆಯಲೇ ಇಲ್ಲ. ಇವೆಲ್ಲವುಗಳ ನಡುವೆ ಪುಟಿದೆದ್ದು ಬಂದ ಕಬಡ್ಡಿ, ಕ್ರಿಕೆಟ್‌ಗೆ ಪೈಪೋಟಿ ನೀಡುವ ಹಂತಕ್ಕೆ ತಲುಪಿದೆ. 'ಭಾರತ ವೀಕ್ಷಕರ ಸಂಶೋಧನಾ ಮಂಡಳಿ'ಯ (ಬಿಎಆರ್‌ಸಿ) ವರದಿ ಪ್ರಕಾರ ಐಪಿಎಲ್ ನೋಡುತ್ತಿದ್ದ ಶೇ. 70ರಷ್ಟು ಕ್ರೀಡಾಪ್ರೇಮಿಗಳು ಈಗ ಕಬಡ್ಡಿ ನೋಡುತ್ತಿದ್ದಾರೆ.

'ಪಿಕೆಎಲ್' ತನ್ನ ಮೊದಲ ಆವೃತ್ತಿಯಲ್ಲಿ 37 ದಿನಗಳ ಕಾಲ ನಡೆಸಿದ 60 ಪಂದ್ಯಗಳನ್ನು 435 ದಶಲಕ್ಷ ಜನ ವೀಕ್ಷಿಸಿದ್ದರು. ಅದೇ ವರ್ಷ ಐಪಿಎಲ್ ಟೂರ್ನಿಯನ್ನು 552 ದಶಲಕ್ಷ ಜನ ನೋಡಿದ್ದರು. ಮೊದಲ ಆವೃತ್ತಿಯ 'ಜೈಪುರ ಪಿಂಕ್ ಪ್ಯಾಂಥರ್ಸ್' ಮತ್ತು 'ಯು ಮುಂಬಾ' ತಂಡಗಳ ನಡುವಿನ ಫೈನಲ್ ಪಂದ್ಯವೊಂದನ್ನೇ ಅಂದಾಜು 86.4 ದಶಲಕ್ಷ ಜನ ವೀಕ್ಷಣೆ ಮಾಡಿದ್ದು ದಾಖಲೆಯಾಗಿತ್ತು. 'ಬಾರ್ಕ್' ವರದಿ ಪ್ರಕಾರ ಭಾರತದಲ್ಲಿ ಕ್ರಿಕೆಟ್ ಹೊರತುಪಡಿಸಿದರೆ ಹೆಚ್ಚು ಪ್ರಚಾರ ಪಡೆದ 'ಪಿಕೆಎಲ್'ನ ಆರನೇ ಆವೃತ್ತಿಯ 75 ಪಂದ್ಯಗಳನ್ನು ದೇಶದಾದ್ಯಂತ 1,188 ದಶಲಕ್ಷ ಜನ ವೀಕ್ಷಿಸಿದ್ದಾರೆ.

## ಖರೀದಿಗೆ ಬಂತು ವರ್ಚಸ್ಸು

2014ರ ಮೇ ತಿಂಗಳಲ್ಲಿ ಎಂಟು ತಂಡಗಳೊಂದಿಗೆ ಆರಂಭವಾದ 'ಪ್ರೊ ಕಬಡ್ಡಿ' ತನ್ನ ಮೊದಲ ಆವೃತ್ತಿಯಿಂದಲೇ ದೊಡ್ಡ ಮೊತ್ತ ಕೊಟ್ಟು ಆಟಗಾರರನ್ನು ಖರೀದಿಸಲು ಆರಂಭಿಸಿತು. ಆಗ ಭಾರತ ಕಬಡ್ಡಿ ತಂಡದ ನಾಯಕರಾಗಿದ್ದ ರಾಕೇಶ್ ಕುಮಾರ್ ಅವರನ್ನು ₹12.80 ಲಕ್ಷಕ್ಕೆ 'ಪಟ್ನಾ ಪೈರೇಟ್ಸ್' ಖರೀದಿಸಿತು. ಸ್ಟಾರ್ ಆಟಗಾರ ದೀಪಕ್ ಹೂಡಾ ₹12.60 ಲಕ್ಷಕ್ಕೆ 'ತೆಲುಗು ಟೈಟನ್ಸ್' ಪಾಲಾಗಿದ್ದರು. ಒಟ್ಟು 60 ಪಂದ್ಯಗಳು ನಡೆದಿದ್ದವು.

ಆರಂಭದ ಆವೃತ್ತಿಗಳಲ್ಲಿ ಆಟಗಾರರ 'ಬೆಲೆ' ಲಕ್ಷಗಳ ಲೆಕ್ಕದಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ಕೋಟಿಗಟ್ಟಲೆ ಹಣ ನೀಡಿ ಅವರನ್ನು ಖರೀದಿಸಲಾಗಿದೆ. ಈಗ ನಡೆಯುತ್ತಿರುವ ಒಂಬತ್ತನೇ ಆವೃತ್ತಿಯ ಹರಾಜಿನಲ್ಲಿ 'ಬೆಂಗಳೂರು